ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಮುಖ್ಯಮಂತ್ರಿಗಳು ಸುಮಾರು ೮೦೦ ಕೋಟಿ ರೂಪಾಯಿಗಳಷ್ಟು ಕೈಗಾರಿಕಾ ಬಂಡವಾಳ ನಮ್ಮ ರಾಜ್ಯಕ್ಕೆ ಇರುವಂಥ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದರು. ಇವರ ಒಂದು ವಿದೇಶ ಪ್ರವಾಸದ ಕಾಲದಲ್ಲಿ ಅಲ್ಲಿನ ಕನ್ನಡ ಸಂಘಗಳಿಗೆ ಮತ್ತು ಇತರೇ ಸಂಘಗಳಿಗೆ ನಮ್ಮ ರಾಜ್ಯ ಸರ್ಕಾರದ ಪರವಾಗಿ ದೇಣಿಗೆಯನ್ನು ಪ್ರಕಟ ಮಾಡಿದ್ದಾರೆಂದು ವರದಿಯಾಗಿದೆ. ಆದ್ದರಿಂದ ಎಷ್ಟೆಷ್ಟು ದೇಣಿಗೆಯನ್ನು ಪ್ರಕಟ ಮಾಡಿದ್ದಾರೆಂಬುದನ್ನು ತಿಳಿಸಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಪ್ರವಾಸದ ಕಾಲದಲ್ಲಿ ಯಾವುದೇ ಕನ್ನಡ ಸಂಘಗಳಿಗೆ ದೇಣಿಗೆ ಕೊಡುತ್ತೇವೆಂದು ನಾನು ಪ್ರಕಟ ಮಾಡಲಿಲ್ಲ. ಕೆಲವು ಸಂಘಗಳವರು ತಮಗೆ ಕನ್ನಡ ಟೈಪ್‌ರೈಟರ್‌ಗಳು ಸಿಗುವುದಿಲ್ಲವಾದ ಕಾರಣ ಅವುಗಳನ್ನು ಕಳುಹಿಸಿಕೊಡಿ ಎಂದು ಹೇಳಿದ್ದಾರೆ. ಅದನ್ನು ಕಳುಹಿಸಿ ಕೊಡುತ್ತೇವೆಂದು ಹೇಳಿದ್ದೇವೆ. ಈ ಹಿಂದೆ ಸಹ ಕನ್ನಡ ಟೈಪ್‌ರೈಟರ್‌ಗಳನ್ನು ಕಳುಹಿಸಿಕೊಟ್ಟ ಉದಾಹರಣೆಗಳು ಇವೆ. ಕೆಲವರು ಕನ್ನಡ ಪುಸ್ತಕಗಳನ್ನು ಕಳುಹಿಸಿಕೊಡಿ, ಲೈಬ್ರರಿ ಪ್ರಾರಂಭ ಮಾಡುತ್ತೇವೆಂದು ಕೇಳಿದ್ದಾರೆ. ನಾವು ಆಗಲಿ ಎಂದು ಹೇಳಿದ್ದೇವೆ. ಈ ಹಿಂದೆ ಸಹ ಪುಸ್ತಕಗಳನ್ನು ಕಳುಹಿಸಿಕೊಡಲಾಗಿದೆ. ಈ ಹಿಂದೆಯೇ ಮಾಡಿದ ಘೋಷಣೆಯ ಪ್ರಕಾರ ಈಗ ಷಿಕಾಗೊ ವಿಶ್ವವಿದ್ಯಾ ನಿಲಯದಲ್ಲಿ ಕನ್ನಡದ ಚೇರ್ ಅನ್ನು ಪ್ರಾರಂಭ ಮಾಡಲಾಗುತ್ತದೆಂದು ಪುನಃ ಘೋಷಣೆ ಮಾಡಿದ್ದೇವೆ

ಶ್ರೀ ಬಿ. ಲಕ್ಕಪ್ಪ.—ಪ್ರವಾಸ ಕಾಲದಲ್ಲಿ ಮುಖ್ಯಮಂತ್ರಿಗಳ ಬ್ರೀಫ್ ಕೇಸ್ ಕಳೆದುಹೋಯಿ ತೆಂದು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಅದು ಪುನಃ ಸಿಕ್ಕಿದೆಯೇ ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಪ್ರವಾಸ ಹೋದ ಸಮಯದಲ್ಲಿ ಇಲ್ಲಿ ಅನೇಕ ಊಹಾಪೋಹ ಗಳು, ಕಟ್ಟುಕಥೆಗಳು, ಕಾಲ್ಪನಿಕ ಕಥೆಗಳು ಹುಟ್ಟಿಕೊಂಡಿದ್ದನ್ನು ನಾನು ಕೇಳಿದ್ದೇನೆ. ಇದರಲ್ಲಿ ಈ ಬ್ರೀಫ್ ಕೇಸ್ ವಿಚಾರ ಸಹ ಸೇರಿದೆ. ಅದರಲ್ಲಿ ಏನಿತ್ತು ? ಅದರಲ್ಲಿ ಏನಿರಬಹುದು ? ಅದರಲ್ಲಿ ನೋಟಿನ ಕಂತೆಗಳು ಏನಾದರೂ ಇದ್ದವೇ ? ದುರ್ದೈವದ ಸಂಗತಿ ಎಂದರೆ ಅದು ನನ್ನದಾಗಿರಲಿಲ್ಲ. ಅದು ನನ್ನ ಸೆಕ್ರೆಟರಿ ಅವರದಾಗಿತ್ತು. ಏರ್‌ಪೋರ್ಟ್‌ಗಳಲ್ಲಿ ಕೂಲಿ ಕೆಲಸಗಾರರು ಇರುವುದಿಲ್ಲ. ನಮ್ಮ ಸಾಮಾನುಗಳನ್ನು ಅಲ್ಲಿರುವ ಖಾಲಿ ಗಾಡಿಗಳ ಸಹಾಯದಿಂದ ನಾವೇ ತೆಗೆದುಕೊಂಡು ಬರಬೇಕಾಗುತ್ತದೆ ಆದರಂತೆ ನಮ್ಮ ಸೆಕ್ರೆಟರಿ ಅವರು ತಮ್ಮ ಸೂಟ್‌ಕೇಸನ್ನು ತರಬೇಕೆಂದುಕೊಂಡು ತಮ್ಮ ಕೈಯಲ್ಲಿದ್ದ ಬ್ರೀಫ್ ಕೇಸ್‌ನ್ನು ಅಲ್ಲಿದ್ದ ಒಂದು ಖಾಲಿ ಗಾಡಿಯ ಮೇಲಿಟ್ಟು ಇನ್ನೊಂದು ಗಾಡಿಯನ್ನು ತೆಗೆದು ಕೊಂಡು ಹೋಗಿ ಪುನಃ ವಾಪಸ್ ಬರುವುದರೊಳಗಾಗಿ ಇವರು ಇಟ್ಟಿದ್ದ ಬ್ರಿಫ್‌ಕೇಸ್‌ನ ಗಾಡಿ ಅಲ್ಲಿರಲಿಲ್ಲ. ಆ ಗಾಡಿ ಖಾಲಿ ಇದೆ ಎಂದುಕೊಂಡು ಬ್ರೀಫ್ ಕೇಸ್ ಸಮೇತ ಬೇರೆ ಯಾರೋ ತೆಗೆದು ಕೊಂಡು ಹೋಗಿದ್ದರು. ಯಿಯನ್ನಾದಲ್ಲಿರುವಂತಹ ನಮ್ಮ ದೇಶದ ರಾಯಭಾರಿ ಆದಂಥ ಶ್ರೀ ಹಿರೇಮಠ್ ಅವರು ಅದನ್ನು ಹುಡುಕಿಸಿ ಎರಡು-ಮೂರು ದಿವಸದ ನಂತರ ನಮಗೆ ಲಂಡನ್‌ಗೆ ಕಳುಹಿಸಿಕೊಟ್ಟರು. ಈ ಬ್ರೀಫ್‌ಕೇಸ್ ನಮ್ಮ ಸೆಕ್ರೆಟರಿ ಅವರಿಗೆ ಸೇರಿದ್ದಾದು ಆದರಲ್ಲಿ ಅಂತಹ ರಹಸ್ಯ ವಾದಂಥ ವಸ್ತು ಯಾವುದೂ ಇರಲಿಲ್ಲ.

ಸರ್ಕಾರಿ ನೌಕರರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್ ಒದಗಿಸುವುದರ ಬಗ್ಗೆ

೯೦. ಶ್ರೀ ಕೃಷ್ಣಪ್ಪ (ಪರ್ತೂರು).—ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ನೌಕರರಿಗೆ ರಿಯಾಯಿತಿ ದರದಲ್ಲಿ ಬಸ್‌ಪಾಸ್ ಒದಗಿಸುವುದಾಗಿ ಸರ್ಕಾರ ಆಶ್ವಾಸನೆ ಕೊಟ್ಟಿದ್ದು ನಿಜವೇ ?

ಆ) ಹಾಗಿದ್ದಲ್ಲಿ, ಅದು ಇನ್ನೂ ಕಾರ್ಯಗತವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ಹಾಗೂ ಅದಕ್ಕೆ ಕಾರಣವೇನು ?

ಇ) ಅದನ್ನು ಎಂದಿನಿಂದ ಜಾರಿ ತರಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಮಂತ್ರಿಗಳು).—

ಅ), ಆ ಮತ್ತು ಇ) ಬೆಂಗಳೂರು ನಗರ ಸಾರಿಗೆ ಬಸ್‌ಗಳಲ್ಲಿ ಸರ್ಕಾರಿ ನೌಕರರಿಗೆ ರಿಯಾಯಿತಿ ಕೂಪನ್ ಕೊಡುವ ವಿಷಯವನ್ನು ಪರಿಶೀಲಿಸಲಾಗಿದೆ. ನೌಕರರ ಸಂಘವು ಮುಖಂಡ

ರೊಡನೆ ನಡೆಸಿದ ಚರ್ಚೆಯಲ್ಲಿ ಸಂಸ್ಥೆಯವರ ಪರತ್ತುಗಳಿಗೆ ಸಂಘದವರು ಸಮ್ಮತಿ ಸೂಚಿಸಿಲ್ಲವಾದ್ದರಿಂದ ಯಾವುದೇ ತೀರ್ಮಾನವನ್ನು ಕೈಗೊಂಡಿಲ್ಲ.

ಶ್ರೀ ಎ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ೧೩-೧೨-೧೯೫೫ರಲ್ಲಿ ಮಾನ್ಯ ಸಾರಿಗೆ ಸಚಿವರು ಒಂದು ಹೇಳಿಕೆ ಕೊಟ್ಟಿದ್ದಾರೆ, ಅದು ಈ ರೀತಿ ಇದೆ,

> "The State Government will soon introduce passes with coupens for its employees to travel by KSRTC Buses."

ಇದಾದ ನಂತರ ಮಾನ್ಯ ಸಿಧ್ಯ ಅವರು ಇನ್ನೊಂದು ಮಾತನ್ನು ಹೇಳಿದ್ದಾರೆ. ಏನೆಂದರೆ,

> "KSRTC authorities would work out the details like quantum of concession to be given to the employees while issuing passes...etc.

ಎಂದು. ಈಗಲೂ ಸಹ ಮಾನ್ಯ ಮಂತ್ರಿಗಳು ಇದೇ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈ ಒಂದು ಸೌಲಭ್ಯವನ್ನು ರಾಜ್ಯಸರ್ಕಾರದ ನೌಕರರಿಗೆ ಕೊಡುವುದರಿಂದ ಸರ್ಕಾರಕ್ಕೆ ಆರ್ಥಿಕ ಕಾರ್ಪೊರೇಷನ್‌ಗೆ ಯಾವುದೇ ರೀತಿಯ ನಷ್ಟವಾಗುವುದಿಲ್ಲವೆಂದು ಹೇಳಿದ್ದಾರೆ. ಇದನ್ನು ಜಾರಿಗೆ ತರುವ ಬಗ್ಗೆ ಮಾನ್ಯ ಸಾರಿಗೆ ಸಚಿವರು ೧೯೮೫ರಲ್ಲಿಯೇ ಹೇಳಿಕೆ ಕೊಟ್ಟಿದ್ದರೂ ಸಹ ಇಲ್ಲಿಯವರೆಗೆ ಜಾರಿಗೆ ತರದಿರಲು ಕಾರಣವೇನು ? ಇದನ್ನು ಜಾರಿಗೆ ತರುವ ವಿಚಾರದಲ್ಲಿ ಯಾವ ಕಂಡೀಷನ್‌ಗಳನ್ನು ಇವರು ನೌಕರರ ಸಂಘದ ಮೇಲೆ ಹಾಕಿದ್ದಾರೆಂಬುದನ್ನು ಮಾನ್ಯಮಂತ್ರಿಗಳು ತಿಳಿಸಬೇಕು ?

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಒಂದು ಆಜ್ಞೆ ಹೊರಡಿಸಿದ್ದು ನಿಜ. ಇದರ ಬಗ್ಗೆ ಅಡಿಷನಲ್ ಚೀಫ್-ಸೆಕ್ರೆಟರಿ ಅವರು ಸಾರಿಗೆ ಸಂಸ್ಥೆಯ ಅಧಿಕಾರಿಗಳ ಮತ್ತು ನೌಕರರ ಸಂಘದ ಮುಖಂಡರೊಡನೆ ಮಾತುಕತೆ ನಡೆಸಿದ್ದಾರೆ. ಆದರೆ ಇನ್ನೂ ಹೊಂದಾಣಿಕೆ ಆಗಿಲ್ಲ. ಚರ್ಚೆ ಇನ್ನೂ ನಡೆಯುತ್ತಿದೆ. ಸರ್ಕಾರ ಇದರ ಬಗ್ಗೆ ಆದಷ್ಟು ಬೇಗ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತದೆ.

ಶ್ರೀ ಎ. ಕೃಷ್ಣಪ್ಪ.—ನೌಕರರ ಸಂಘದ ಮುಖಂಡರಿಗೆ ಸಾರಿಗೆ ಸಂಸ್ಥೆಯವರು ಯಾವ ಯಾವ ಕಂಡೀಷನ್‌ಗಳನ್ನು ಈ ಬಗ್ಗೆ ಹಾಕಿದ್ದಾರೆಂಬುದನ್ನು ತಾವು ತಿಳಿಸಬೇಕು ?

ಶ್ರೀ ಆರ್. ವಿ. ದೇಶಪಾಂಡೆ.—೫ ಪರ್ಸೆಂಟ್ ರಿಬೇಟ್ ಮೇಲೆ ಕೊಡಬೇಕು ಎಂದು ಕೇಳುತ್ತಾ ಇದ್ದಾರೆ. ಕೆ. ಎಸ್. ಆರ್. ಟಿ. ಸಿ. ಯವರು ೫-೦೦ ರೂಪಾಯಿ ಕನ್ಸೆಷನ್ ಕೊಡುತ್ತೇವೆಂದು ಸಲಹೆ ಕೊಟ್ಟಿದ್ದಾರೆ. ಇದರಲ್ಲಿ ಕೆ. ಎಸ್. ಆರ್. ಟಿ. ಸಿ. ಗೆ ನಷ್ಟವಾಗುತ್ತದೆ ನಿಜ. ಅದು ಎಷ್ಟು, ಏನು ಎನ್ನುವುದು ಮುಖ್ಯ.

ಅಧ್ಯಕ್ಷರು.—ಶ್ರೀ ಪ್ರಭಾಕರ ರಾಣೆ ಮತ್ತು ಶ್ರೀಪತಿ ಲೀಲಾದೇವಿ ಪ್ರಸಾದ್ ಅವರ ಪ್ರಶ್ನೆಗಳನ್ನು ಆಮೇಲೆ ತೆಗೆದುಕೊಳ್ಳೋಣ. ಮಾನ್ಯ ಮುಖ್ಯ ಮಂತ್ರಿಗಳು ಈಗ ಹೊರಗಡೆ ಹೋಗುತ್ತಾರೆ, ಆದ್ದರಿಂದ ಅವರಿಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಈಗ ತೆಗೆದುಕೊಳ್ಳೋಣ.

ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಿರುವ ಬಗ್ಗೆ

೬೧೧. ಶ್ರೀಮತಿ ಕೆ.ಎಸ್. ನಾಗರತ್ನಮ್ಮ, (ಗುಂಡ್ಲುಪೇಟೆ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೭ನೇ ಸಾಲಿನಲ್ಲಿ ಸರ್ಕಾರಿ ಸೇವಾ ನಿಯಮಾವಳಿ ೨೫೫ರ ಮೇರೆಗೆ ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ಸೇವೆಯಿಂದ ನಿವೃತ್ತಿಗೊಳಿಸಿರುವ ನೌಕರರ ಒಟ್ಟು ಸಂಖ್ಯೆ ಎಷ್ಟು ? (ಅವರ ಹೆಸರು, ಇಲಾಖೆ ಮತ್ತು ಹುದ್ದೆಗಳನ್ನು ತಿಳಿಸುವುದು),

ಆ ಸದರಿ ನೌಕರರುಗಳನ್ನು ಯಾವ ಯಾವ ಕಾರಣಗಳ ಮೇಲೆ ನಿವೃತ್ತಿಗೊಳಿಸಲಾಗಿದೆ ? (ಪತ್ರಿಯೊಬ್ಬ ನೌಕರನ ಕಾರಣಗಳನ್ನು ನಿವೃತ್ತಿಯ ಆಧಾರದ ಮೇಲೆ ತಿಳಿಸುವುದು)